**CC 2159/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 2159/2025

**ಸಿ ಡಬ್ಲ್ಯೂ** -3

**ಪಿ ಡಬ್ಲ್ಯೂ** -3

**ಸಾಕ್ಷಿಯ ಹೆಸರು** - **ಓಂ ಪ್ರಕಾಶ್ ಆಚಾರ್**
**ತಂದೆಯ ಹೆಸರು** - **ಬ್ರಹ್ಮಯ್ಯ ಆಚಾರ್**
**ವಯಸ್ಸು** - 47 **ವರ್ಷಗಳು**
**ಉದ್ಯೋಗ** - **ಅಕ್ಕಸಾಲಿಗ**
**ವಾಸಸ್ಥಳ** - **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 18-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **5** ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿಃ **5(**ಬಿ**)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿಃ **28-12-2024** ರಂದು ಸಂಜೆ **4.00** ಗಂಟೆಗೆ ಸಣಳ್ಳ ಬನಶಂಕರಿ ದೇವಸ್ಥಾನದ ಹತ್ತಿರ ಮಾಡಿದ್ದೆ. ನಿಪಿಃ **5** ರ ಪಂಚನಾಮೆಯನ್ನು ಚಾಸಾ **-1** ರವರ ಬಂಗಾರದ ಸರ ಕಳ್ಳತನ ಆದ ಸ್ಥಳದಲ್ಲಿ ಮಾಡಲಾಗಿತ್ತು. ನನ್ನೊಂದಿಗೆ ಚಾಸಾ **-2** ರವರು ಹಾಜರಿದ್ದರು. ಸ್ಥಳವನ್ನು ಚಾಸಾ **-1** ರವರು ತೋರಿಸಿದ್ದರು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **6** ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **6**(ಬಿ) ಎಂದು ಗುರುತಿಸಲಾಯಿತು. ನಿಪಿಃ **6** ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ.

ಈಗ ನಾನು ನೋಡುತ್ತಿರುವ ಒಂದು ಪೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸಾಕ್ಷಿ ಫೊಟೋ ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿಃ **2** ಎಂದು ಗುರುತಿಸಲಾಗಿದೆ.

## ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ.ಎಂ ವಕೀಲರಿಂದಃ

ನನಗೆ ಪಂಚನಾಮೆಗೆ ಬರಲು ಪೋಲಿಸರು ನೋಟಿಸ್ ನೀಡಿರಲಿಲ್ಲ. ನನ್ನನ್ನು ಚಾಸಾ **-1** ರವರೇ ಕರೆದಿದ್ದರು. ಪಂಚಾನಾಮೆ ಆಗಿದ್ದ ಸ್ಥಳದ ಅಕ್ಕಪಕ್ಕದ ನಿವಾಸಿಗಳ ಹೆಸರು ನನಗೆ ಗೊತ್ತಿಲ್ಲ ಅಂದರೆ ಸರಿ. ಸದರಿ ಪಂಚನಾಮೆ ಬರೆಯಲು ಯಾರು ಮಾಹಿತಿ ನೀಡಿದರು ಮತ್ತು ಅದನ್ನು ಯಾರು ಟೈಪ್ ಮಾಡಿದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಮರೆಡ್ಡಿ ಎಂಬ ಪೋಲಿಸರು ಟೈಪ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿಃ **2** ರ ಪೋಟೋವನ್ನು ತೆಗೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಚಾಸಾ **-1** ರವರು ಕಳ್ಳತನ ಆಗಿತ್ತು ಎಂದು ಹೇಳಿದ್ದ ಸರದ ವಿನ್ಯಾಸದ ಬಗ್ಗೆ ವಿವರಣೆಯನ್ನು ನೀಡಿರಲಿಲ್ಲ ಅಂದರೆ ಸರಿ.

ನಾನು, ಚಾಸಾ **-2** ಮತ್ತು ಚಾಸಾ **-1** ರವರ ಅಳಿಯ ಸ್ನೇಹಿತರು ಅಂದರೆ ಸರಿ. ಚಾಸಾ **-1** ರವರ ಕುಟುಂಬ ನನಗೆ **20** ವರ್ಷಗಳಿಂದ ಪರಿಚಯವಿರುತ್ತದೆ. ಪ್ರಕರಣದ ಬಗ್ಗೆ ನನಗೆ ಯವುದೇ ಮಾಹಿತಿ ಇಲ್ಲದಿದ್ದರೂ ಚಾಸಾ **-1** ರವರ ಕುಟುಂಬಕ್ಕೆ ಸಹಾಯ ಆಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಪೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ. ಕಚ್ಚಾ

ನಕಾಶೆ ನನ್ನ ಸಮಕ್ಷಮ ತಯಾರಿಸಿಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿಯೇ ದಾಲಗೆಗಳನ್ನು ಸೃಷ್ಟಿಸಲಾಗಿತ್ತು ಅಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.